ದಿನಾಂಕ 14.08.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಃ ಶ್ರೀ ಹೆಚ್.ಡಬ್ಲ್ಯೂ.ಎ ವಕೀಲರಿಂದಃ**

ವಾದಿಯ ಗಂಡ ಮೂಲತಹ ಶಿರಾ ತಾಲ್ಲೂಕಿನವರು ಹಾಗೂ ವ್ಯವಸಾಯಗಾರರ ಕುಟುಂಬ ಎಂದರೆ ಸರಿ. ಸರ್ವೆ ನಂಬರ್ ೧೨೦/೨, ೨೨೪/೨ ಮತ್ತು ೮೪ ರ ಸ್ವತ್ತುಗಳನ್ನು ವಾದಿ ಮತ್ತು ಆಕೆಯ ಗಂಡ ತಮ್ಮ ಸ್ವಂತ ಆದಾಯದಿಂದ ಖರೀದಿಸಿದ್ದಾರೆ ಎಂದರೆ ನನ್ನ ತಂದೆ ಆಕೆಯ ಹೆಸರಿನಲ್ಲಿ ಖರೀದಿಸಿದ್ದಾರೆ ಎನ್ನುತ್ತಾರೆ. ನನ್ನ ತಂದೆ ಆದಾಯ ತೆರಿಗೆ ಪಾವತಿದಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ವಾದಿಗೆ ರೂ. ೫೦ ಲಕ್ಷ ಹಣ, ೫ ಕೆ.ಜಿ ಬಂಗಾರ ಮತ್ತು ೩ ಕೆ.ಜಿ ಬೆಳ್ಳಿ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಆದಾಯ ತೆರಿಗೆ ಪಾವತಿದಾರರಾಗಿದ್ದರು ಸಹ ಉದ್ದೇಶ ಪೂರ್ವಕವಾಗಿ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಮ್ಮ ಲೇವಾ-ದೇವಿ ವ್ಯವಹಾರದ ಬಗ್ಗೆ ದಾಖಲೆ ನಿರ್ವಹಿಸುತ್ತಿದ್ದರು ಎಂದರೆ ಸರಿ. ನನ್ನ ತಂದೆ ತಮ್ಮ ಜೀವಿತ ಅವಧಿಯಲ್ಲಿ ಕುಟುಂಬದ ಎಲ್ಲಾ ಸ್ವತ್ತುಗಳ ಕಂದಾಯ ಕಟ್ಟುತ್ತಿದ್ದರು ಎಂದರೆ ಸರಿ.

ನನ್ನ ತಂದೆ ತೀರಿಕೊಂಡ ನಂತರ ಎಷ್ಟು ದಾವೆಗಳನ್ನು ಹೂಡಿದ್ದೀರಾ ಎಂದರೆ ೨ ದಾವೆಗಳನ್ನು ಹೂಡಿರುತ್ತೇನೆ. ನನ್ನ ತಂದೆಯ ಬಳಿ ಎಷ್ಟು ಪ್ರನೋಟ್‌ಗಳು ಇದ್ದವು ಎಂದರೆ ಸುಮಾರು ೨೫ ಪ್ರನೋಟ್‌ಗಳು ಇದ್ದವು. ಅವುಗಳ ಮೊತ್ತದ ವಿವರ ಹೇಳಲು ಆಗುವುದಿಲ್ಲ. ಇವುಗಳಿಂದ ಎಷ್ಟು ಹಣ ವಸೂಲಾಗಿದೆ ಎಂದರೆ ಪ್ರನೋಟ್‌ಗಳಿಂದ ನಿಖರವಾಗಿ ಎಷ್ಟು ಹಣ ವಸೂಲಾಗಿದೆ ಎಂದು ಹೇಳಲು ಬರುವುದಿಲ್ಲ, ಆದರೆ ಒಟ್ಟು ಎಷ್ಟು ಮೊತ್ತ ಬಂದಿತ್ತು ಎಂದು ಈಗಾಗಲೇ ತಿಳಿಸಿದ್ದೇನೆ. ನನ್ನ ತಂದೆ ಬಳಿ ಇದ್ದ ಪ್ರನೋಟ್‌ಗಳ ಮೂಲಕ ನಾನು ಸುಮಾರು ೫೦ ಲಕ್ಷ ಸಾಲ ವಸೂಲಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಯಾವುದೇ ಹಣವನ್ನು ವಾದಿಗೆ ನೀಡಿಲ್ಲ ಎಂದರೆ ನನ್ನ ತಾಯಿ ವಾದಿಗೆ ಹಣ ನೀಡಿರುವುದಾಗಿ ನನಗೆ ತಿಳಿಸಿರುತ್ತಾರೆ, ಆ ಪೈಕಿ ರೂ. ೧ ಲಕ್ಷ ಹಣ ನೀಡಿದ್ದನ್ನು ನಾನು ಕಣ್ಣಾರೆ

ನೋಡಿದ್ದೇನೆ. ಕಳೆದ ೧೫ ವರ್ಷಗಳಿಂದ ನನ್ನ ಮತ್ತು ವಾದಿಯ ನಡುವೆ ವೈಮನಸ್ಸು ಇದೆ ಎಂದರೆ ಆಸ್ತಿ ವಿಚಾರವಾಗಿ ಸ್ವಲ್ಪ ವೈಮನಸ್ಸು ಇದೆ, ಉಳಿದಂತೆ ಮಾತುಕತೆ ಆಡುತ್ತೇನೆ.

ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ವಾದಿಯ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಪ್ರೀತಿಸಿ ವಿವಾಹವಾಗಿದ್ದ ಕಾರಣ ನನ್ನ ತಾಯಿಯ ಜೊತೆ ಉತ್ತಮ ಸಂಬಂಧ ಹೊಂದಿಲ್ಲದ ಕಾರಣ ಅವರು ನನ್ನ ಜೊತೆಯಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮುಗಿಸಿದ ನಂತರ ಬೆಂಗಳೂರಿನಲ್ಲಿಯೇ ವಾಸ ಇದ್ದೇನೆ ಎಂದರೆ ಸರಿಯಲ್ಲ. ವಿದ್ಯಾಭ್ಯಾಸ ಮುಗಿಸಿದ ನಂತರ ಎಲ್ಲಿ ವಾಸ ಇದ್ದೀರಿ ಎಂದರೆ ೬ ತಿಂಗಳ ಕಾಲ ಬೆಂಗಳೂರಿನಲ್ಲಿದ್ದು, ನಂತರ ಕೆಲಸ ದೊರೆತ ಕಾರಣ ಹಾಸನಕ್ಕೆ ಹೋಗಿರುತ್ತೇನೆ. ನಾನು ಕಳೆದ ೨೭ ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾ ಅಲ್ಲಿಯೇ ವಾಸವಿದ್ದೇನೆ. ನಾನು ೧೯೮೬ ನೇ ಸಾಲಿನಲ್ಲಿ ಎಂ.ಬಿ.ಬಿ.ಎಸ್ ಪದವಿ ಪಡೆದಿರುತ್ತೇನೆ. ನಾನು ನೌಕರಿ ಸೇರುವ ಪೂರ್ವದಲ್ಲಿ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ವಿದ್ಯಾರ್ಥಿ ವೇತನ ಬರುತ್ತಿತ್ತು ಎನ್ನುತ್ತಾರೆ. ನೌಕರಿ ಸಿಗುವ ೬ ತಿಂಗಳ ಸಮಯದಲ್ಲಿ ಖಾಸಗಿಯಾಗಿ ಕೆಲಸ ಮಾಡುತ್ತಿದ್ದೇ.

ನನ್ನ ತಾಯಿಯವರ ತಾಯಿ ದೊಡ್ಡ ಜಮೀನುದಾರರು, ಅವರಿಗೆ ಅನೇಕ ಹುಣಸೇ ಮರಗಳು ಇದ್ದ ಸುಮಾರು ೨೫ ಎಕರೆ ಜಮೀನು ಇತ್ತು ಎಂದರೆ ಸರಿಯಲ್ಲ. ಸದರಿಯವರಿಗೆ ನನ್ನ ತಾಯಿ ಹಾಗೂ ಸೋದರ ಮಾವ ಹನುಮಂತಪ್ಪ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ಸೋದರ ಮಾವ ಹನುಮಂತಪ್ಪ ಇವರು ೧೯೭೦ ರ ಸಾಲಿನಲ್ಲಿ ವೈದ್ಯರಾಗಿದ್ದರು ಎಂದರೆ ಅವರು ವೈದ್ಯರಾಗಿದ್ದ ವರ್ಷ ಗೊತ್ತಿಲ್ಲ, ಆದರೆ ವೈದ್ಯರಾಗಿದ್ದರು. ಅವರು ಬೆಂಗಳೂರಿನ ಎಮ್.ಎಸ್.ರಾಮಯ್ಯ ಅಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ವಾದಿಯ/ನಮ್ಮ ತಾಯಿಯ ತಾಯಿಗೆ ಸಾಕಷ್ಟು ಜಮೀನು ಮತ್ತು ಆದಾಯ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿಯ ತಾಯಿಗೆ ವಾದಿ ಒಬ್ಬಳೇ(ಮಗಳ ಮೂಲಕ) ಮೊಮ್ಮಗಳು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ವಾದಿಯೇ ಮೊದಲಿಗೇ ಪದವಿ ಪಡೆದರವರು ಎಂದರೆ ಸರಿ. ನನ್ನ ತಾಯಿಯ ತಾಯಿ ಲಕ್ಷ್ಮಮ್ಮ ಇವರಿಗೆ ವಾದಿಯ ಮೇಲೆ ಅಪಾರವಾದ ಪ್ರೀತಿ, ಮಮಕಾರ ಇತ್ತು ಎಂದರೆ ಸರಿಯಲ್ಲ. ಈ ರೀತಿ ಪ್ರೀತಿ, ಮಮಕಾರ ಇದ್ದರು ಸಹ ಉದ್ದೇಶಪೂರ್ವಕವಾಗಿ ನಿರಾಕರಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿಯ ತಾಯಿ ಇವರು, ವಾದಿ ಪದವಿ ಪಡೆದ ಕಾರಣ ಖುಷಿಯಿಂದ ಹಣ ನೀಡಿದ್ದರು ಎಂದರೆ ಸರಿಯಲ್ಲ. ನಾನು ಪಿ.ಯು.ಸಿ ವ್ಯಾಸಂಗವನ್ನು ೧೯೭೭ ರಿಂದ ೭೯ ರವರೆಗೂ ಬೆಂಗಳೂರಿನಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಕುಟುಂಬದಲ್ಲಿ ನಡೆಯುತ್ತಿದ್ದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದ್ದು, ನನ್ನ ತಂದೆಯವರು ತಿಳಿಸುತ್ತಿದ್ದರು. ಆ ಸಮಯದಲ್ಲಿ ನನ್ನ ತಂದೆ ಮಾಡಿದ ವ್ಯವಹಾರಗಳು ಎಲ್ಲಾ ವಿವರಣೆ ಹೇಳಲು ಆಗುತ್ತದೆಯೇ ಎಂದರೆ ಅವರು ಸಾಕಷ್ಟು ವ್ಯವಹಾರ ಮಾಡಿದ್ದು, ದಾಖಲೆ ನೋಡಿದ್ದಲ್ಲಿ ಉತ್ತರಿಸಬಲ್ಲೇ.

ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆಯ ವ್ಯವಹಾರಗಳನ್ನು ನಾನು ನೋಡಿಕೊಳ್ಳುತ್ತಿದ್ದೇ ಎಂದರೆ ಸರಿ, ನನ್ನ ತಂದೆ ಅನಾರೋಗ್ಯದ ಕಾರಣ ವಿಶ್ರಾಂತಿಯಲ್ಲಿದ್ದಾಗ ನನಗೆ ವ್ಯವಹಾರಗಳನ್ನು ನೋಡಿಕೊಳ್ಳಲು ಹೇಳಿದ್ದರು ಎನ್ನುತ್ತಾರೆ. ನನ್ನ ತಂದೆ ತಮ್ಮ ವ್ಯವಹಾರಗಳ ಕುರಿತು ನಿರ್ವಹಿಸಿದ್ದಾರೆ ಎಂದು ಹೇಳಿದ ದಾಖಲೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸದರಿ ದಾಖಲೆ ನನ್ನ ತಾಯಿಯ ಬಳಿ ಇದ್ದು, ನನ್ನ ತಾಯಿ ಸ್ವಲ್ಪ ಸಮಯ ವಾದಿಯ ಬಳಿ ವಾಸವಿದ್ದ ಕಾರಣ ಆ ದಾಖಲೆ ವಾದಿಯ ಕಡೆ ಇರಬಹುದು. ಸದರಿ ದಾಖಲೆ ನೀವು ನೋಡಿದ್ದೀರಾ ಎಂದರೆ ನನ್ನ ತಾಯಿಯವರು ಬದುಕಿದ್ದಾಗ ಆ ದಾಖಲೆ ನೋಡಿಕೊಂಡೇ, ನಾನು ವ್ಯವಹಾರಗಳನ್ನು ನಿರ್ವಹಿಸುತ್ತಿದ್ದೇ. ನನ್ನ ತಾಯಿ ವಿದ್ಯಾಭ್ಯಾಸ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಅವರು ಎಲ್ಲಿವರೆಗೂ ವಿದ್ಯಾಭ್ಯಾಸ ಮಾಡಿದ್ದರು ಎಂದರೆ ಅವರು ಆ ಕಾಲದಲ್ಲಿಯೇ ಎಲ್.ಎಸ್ ವರೆಗೂ ವಿದ್ಯಾಭ್ಯಾಸ ಮಾಡಿದ್ದರು. ನನ್ನ ತಂದೆ ತೀರಿಕೊಂಡ ನಂತರ ವ್ಯವಹಾರದ ಎಲ್ಲಾ ದಾಖಲೆಗಳನ್ನು ನಾನೇ ಹೊಂದಿದ್ದು, ನನ್ನ ತಾಯಿ ಅಥವಾ ವಾದಿಯ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಅಜ್ಜಿ ನೀಡಿದ ಹಣದಿಂದ ಕಲ್ಲುಕುಂಟೆ ಗ್ರಾಮದ ಜಮೀನನ್ನು ಸ್ವಯಾರ್ಜಿತವಾಗಿ ಗಳಿಸಿದ್ದಾರೆ ಎಂದರೆ ಸರಿಯಲ್ಲ. ಕ್ರಯದ ದಿನಾಂಕದಿಂದ ಇಲ್ಲಿಯವರೆಗೂ ಸದರಿ ಜಮೀನಿನ ಖಾತೆ ವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ವಾದಿಯೇ ಸದರಿ ಜಮೀನಿನ ಮಾಲೀಕರಾಗಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಷೆಡ್ಯೂಲ್‌ನ ಜಮೀನು ವಾದಿಯ ಪ್ರತ್ಯೇಕ ಜಮೀನಾಗಿದ್ದು, ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನ ಬೆಲೆ ೨೦೧೦ ನೇ ಸಾಲಿನಿಂದ ತುಂಬಾ ಹೆಚ್ಚಾಗಿದೆ ಎಂದರೆ ೨೦೦೦ ನೇ

ಸಾಲಿನಲ್ಲಿಯೇ ಹೆಚ್ಚಾಗುತ್ತಾ ಬಂದಿದೆ. ಸದರಿ ಜಮೀನು ಅತ್ಯಂತ ಮೌಲ್ಯ ಹೊಂದಿರುವ ಕಾರಣ ನನಗೆ ಯಾವುದೇ ಹಕ್ಕಿಲ್ಲದಿದ್ದರು ಪ್ರತಿವಾದ ಪತ್ರದಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಆಸ್ತಿಗೆ ಸಂಬಂಧಿಸಿದಂತೆ ಅಸಲು ದಾವೆ ೧೬/೨೦೧೨ ಹೂಡಿದ್ದು, ವಜಾಗೊಂಡಿದೆ ಎಂದರೆ ನ್ಯಾಯಾಲಯಕ್ಕೆ ಹಾಜರಾಗಲು ಕಷ್ಟ ಸಾಧ್ಯವಾದ ಕಾರಣ ವಜಾಗೊಂಡಿದೆ. ಸಾಕ್ಷಿ ಪ್ರಮಾಣ ಪತ್ರದ ಪುಟ ಸಂಖ್ಯೆ ೬ ರಿಂದ ೮ ರಲ್ಲಿ ತಿಳಿಸಿರುವ ಮಾರಾಟಗಳು ಶುದ್ದ ಕ್ರಯವಾಗಿದ್ದು, ಅದರ ಬಾಬ್ತು ಪೂರ್ತ ಹಣವನ್ನು ಒಬ್ಬನೇ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ, ಕೇವಲ ನಾಮ ಮಾತ್ರದ ಹಣ ಪಡೆದಿದ್ದೇನೆ. ಸದರಿ ಕ್ರಯದ ಹಣದಲ್ಲಿ ಯಾವುದೇ ಮೊತ್ತವನ್ನು ನನ್ನ ತಾಯಿ ಹಾಗೂ ವಾದಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವಾ ಜಮೀನುಗಳಲ್ಲಿ ಹಕ್ಕು ಕೇಳುವುದಿಲ್ಲ ಎಂದು ಯಾವತ್ತೂ ನನಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ನಾನೇ ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಬೆಂಗಳೂರಿನಲ್ಲಿ ನನ್ನ ಹೆಸರಿನಲ್ಲಿರುವ ನಿವೇಶನವನ್ನು ನನ್ನ ತಂದೆಯೇ ತಮ್ಮ ಆದಾಯದಿಂದ ನನ್ನ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ೧೯೮೩ ನೇ ಸಾಲಿನಲ್ಲಿ ಖರೀದಿಸಲಾಗಿದೆ. ಸದರಿ ವರ್ಷದಲ್ಲಿ ನಾನು ಎಂ.ಬಿ.ಬಿ.ಎಸ್ ವಿದ್ಯಾಭ್ಯಾಸ ಮಾಡುತ್ತಿದ್ದೇ ಎಂದರೆ ಸರಿ.

<u>ಮರುವಿಚಾರಣೆ - ಇಲ್ಲ</u>

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.